**<u>ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀಎಸ್.ಬಿ.ಡಿ. ವಕೀಲರಿಂದಃ</u>**

1) ನಾನು ಮೂರನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. 1972ನೇ ಸಾಲಿನಲ್ಲಿ ನನಗೆ 14 ವರ್ಷ ವಯಸ್ಸು ಆಗಿತ್ತು. ದಾವಾ ಸ್ವತ್ತನ್ನು 1972ರಲ್ಲಿ ಖರೀದಿ ಮಾಡಿದ ಸಮಯದಲ್ಲಿ ಅದರ ಮೇರೆಗೆ ಆ ವರ್ಷದಲ್ಲಿ ಖಾತೆ ದಾಖಲು ಮಾಡಿಸಿಕೊಂಡಿರಲಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಾಯಿ ನಿಡಸಾಲೆ ಅಂಗಡಿ ರಂಗಯ್ಯ ರವರಿಂದ ಖರೀದಿ ಮಾಡಿದ್ದರು. ಆ ರೀತಿ ಸದರಿ ರಂಗಯ್ಯರವರಿಂದ ಸ್ವತ್ತನ್ನು ಖರೀದಿ ಮಾಡಿದ ಕಾಲಕ್ಕೆ ಆಸ್ವತ್ತಿನ ಖಾತೆ ಮತ್ತು ಇತರೆ ಕಂದಾಯ ದಾಖಲೆಗಳು ಅವರ ಹೆಸರಿನಲ್ಲಿ ದಾಖಲಾಗಿದ್ದವೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

2) ನಿಡಿ.6 ರ ತೆರಿಗೆ ಪಾವತಿ ರಶೀದಿಯಲ್ಲಿ ಖಾತೆದಾರನ ಹೆಸರು ಬಿ.ಲಕ್ಷ್ಮಯ್ಯಶೆಟ್ಟಿ ಎಂದು ಇದೆ ಎಂದರೆ ಸಾಕ್ಷಿಯು ಅದು ಅನಧಿಕೃತವಾಗಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. 2020-2021ನೇ ಸಾಲಿನಲ್ಲಿ ದಾವಾ ಸ್ವತ್ತಿನ ಖಾತೆಯನ್ನು ನನ್ನ ಹಾಗೂ ನನ್ನ ತಾಯಿಯ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತೇನೆ. ನಿಡಿ.5 ರ ಮ್ಯುಟೇಷನ್ ವಹಿಯಲ್ಲಿ ನಮೂದಾಗಿರುವ ಕೋರ್ಟ್ ಆದೇಶ ಎಂಬ ವಿವರಣೆಯ ಸಂಬಂಧ ಯಾವ ಕೋರ್ಟ್ ಆದೇಶ ಆಗಿದೆ ಎಂದರೆ ಸಾಕ್ಷಿಯು ಟ್ರಿಬ್ಯುನಲ್ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಡೆದ ಪ್ರಕರಣದಲ್ಲಿ ಆದೇಶ ಆಗಿತ್ತು ಎಂದು ನುಡಿಯುತ್ತಾರೆ.

ನಾನು ಹೇಳಿದಂತೆ ಅಂತಹ ಯಾವುದೇ ಆದೇಶ ಆಗಿರುವುದಿಲ್ಲ ಹಾಗೂ ನಿಶಾನೆ ಪಿ.8 ರಂತೆ ತಹಶೀಲ್ದಾರ್ ಅವರು ಹೊರಡಿಸಿರುವ ಆದೇಶದ ಮೇರೆಗೆ ದಾವಾ ಸ್ವತ್ತಿನ ಖಾತೆಯು ದಾಖಲಾಗಿದೆ ಎಂದರೆ ಸರಿ.

3) ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಶಾನೆ ಪಿ.8 ರ ದಾಖಲೆಯನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.8 ರ ಆದೇಶ ಆದ ಕಾಲಕ್ಕೆ ನನ್ನ ತಾಯಿ ಸೀತಮ್ಮ ಕೋಂ ಲೇಟ್ ಪುಟ್ಟಸ್ವಾಮಿಗೌಡ ಜೀವಿತ ಇರಲಿಲ್ಲ ಎಂದರೆ ಸರಿ. ಆದ ಕಾರಣ ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಶಾನೆ ಪಿ.4 ಮತ್ತು 5 ರ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯ ಗಂಡನಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ವಾದಿಯ ಗಂಡ 1973-1974ನೇ ಇಸವಿಗೂ ಮೊದಲಿನಿಂದಲೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ತಾನು ಸ್ವಾಧೀನದಲ್ಲಿ ಇರುವುದಾಗಿ ನುಡಿಯುತ್ತಾರೆ.

4) ವಾದಿಯ ಗಂಡ 1986-1987 ನೇ ಸಾಲಿನಲ್ಲಿ ವಿಎಸ್ಎಸ್ ಬ್ಯಾಂಕಿನಲ್ಲಿ ದಾವಾ ಸ್ವತ್ತಿನ ಮೇಲೆ ಸಾಲವನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಸಾಲ ಪಡೆದು ದಾವಾ ಸ್ವತ್ತನ್ನು ಬ್ಯಾಂಕಿಗೆ ಆಧಾರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ.6 ರ ಪಹಣಿ ಪತ್ರಿಕೆಯಲ್ಲಿ ಮೊದಲಿಗೆ ವಾದಿ ಸರೋಜಮ್ಮ ಕೋಂ ಅಪ್ಪಾಜಿಗೌಡರ ಹೆಸರು ದಾಖಲಾಗಿತ್ತು ಎಂದರೆ ಸರಿಯಲ್ಲ. ಆ ರೀತಿ ಆಕೆಯ ಹೆಸರಿಗೆ 1994ರಲ್ಲಿ ದಾಖಲಾಗಿದ್ದ ಪಹಣಿ ಪತ್ರಿಕೆಯಲ್ಲಿ ಆಕೆಯ ಹೆಸರನ್ನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ವಾದಿಯ ಹೆಸರಿಗೆ ಕಂದಾಯ ದಾಖಲೆಗಳು ದಾಖಲಾಗಿದ್ದ ಕಾಲದಿಂದಲೂ ಈಗಲೂ ಸಹ ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನ ಹೊಂದಿ ಅನುಭವಿಸುತ್ತಾ

ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸುವ 15 ದಿನಗಳ ಪೂರ್ವದಲ್ಲಿ ನಾನು ವಾದಿಯ ಸ್ವತ್ತಿನ ಸ್ವಾಧೀನಕ್ಕೆ ಧಕ್ಕೆ ಪಡಿಸಲು ಪ್ರಯತ್ನಿಸಿದ ಕಾರಣ ವಾದಿ ನನ್ನ ವಿರುದ್ಧ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ

5) ನಾನು ಸಲ್ಲಿಸಿರುವ ದಾಖಲೆಗಳಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಆದರೂ ಸಹ ಸದರಿ ದಾಖಲೆಗಳ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಾದಿಗಳು ಕಾನೂನು ಬದ್ಧ ಹಕ್ಕುದಾರರು ಮತ್ತು ಮಾಲೀಕರು ಆಗಿದ್ದು ಅವರೇ ಆ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**